ಬಿರುವಂತಾಗಿ ಮಾತೇ ಬಾರದಂತಾಯಿತು.

'ನಿಮಗೆ ನೀವು ಮಾಡಿದ ಕೃತ್ಯದ ಬಗ್ಗೆ ಪಶ್ಚಾತ್ತಾಪವಿದೆ ಎಂದು ಬಲ್ಲೆ.. ನೀವು ಉದ್ದೇಶಪೂರ್ವಕ ಈ ಕೃತ್ಯ ಮಾಡಿಲ್ಲ ಎಂದೂ ನಾನು ಬಲ್ಲೆ.. ಆದರೆ.. ಇಡೀ ಪ್ರಪಂಚದಲ್ಲಿ ಈ ಕೃತ್ಯವೆಸಗಲು ನಿಮ್ಗೆ ನನ್ನ ತಂದೆನೇ ಸಿಕ್ಕಿದ್ರಾ? ಈ ಸತ್ಯ ತಿಳಿದೂ ಕೂಡಾ.. ನಾನು ನಿಮ್ಮ ಜೊತೆ ಹೇಗೆ ಬಾಳಲಿ? ನಿಮ್ಮನ್ನು ನೋಡಿದಾಗ ನೀವು ಮಾಡಿದ ಈ ಕೃತ್ಯ ಕಣ್ಮುಂದೆ ಸುಳಿಯುತ್ತೆ.. ನನ್ನ ತಂದೆಯ ಕೊಲೆಗಾರನೊಂದಿಗೆ ಹೇಗೆ ಸಹಬಾಳ್ವೆ ನಡೆಸಲಿ? ಖಂಡಿತಾ ಆ ಶಕ್ತಿ ನನಗಿಲ್ಲ.. ಮರೆತು ಬಿಡುವಷ್ಟು ಸಣ್ಣ ತಪ್ಪೂ ಇದಲ್ಲ.. ಕ್ಷಮಿಸುವಂಥ ಔದಾರ್ಯವೂ ಸದ್ಯಕ್ಕೆ ನನ್ನಲ್ಲಿಲ್ಲ.. ನೀವು ನನ್ಮುಂದೆ ಹೀಗೆ ನಿಲ್ಲಬೇಡಿ.. ನೀವು ನನ್ನನ್ನು ನಿಜವಾಗಿ ಪ್ರೀತಿಸುವುದಾದರೆ ನನಗೊಂದು ಉಪಕಾರ ಮಾಡ್ತೀರ ಪ್ಲೀಸ್?'

'ಏನದು..? ಹೇಳು ಅಪೂರ್ವ.. ನಿನಗೋಸ್ಕರ ನಾನೇನು ಮಾಡಲಿ? ನಿನ್ನ ನೋವು ಹೇಗೆ ಮರೆಸಲಿ..?'

'ನನ್ನನ್ನು ಮರೆತು ಬಿಡಿ.. ಈ ಕಹಿ ಸತ್ಯದೊಂದಿಗೆ ನಿಮ್ಮೊಂದಿಗೆ ನಾನು ಬಾಳಲಾರೆ.. ನನ್ನ ಪ್ರೀತಿಸುವುದು ನಿಜವೇ ಆದರೆ.. ನೀವು ಈಗ ಹೇಗೆ ಜವಾಬ್ದಾರಿಯುತ ಮನುಷ್ಯನಾಗಿ, ಸಮಾಜದ ಸತ್ಪ್ರಜೆಯಾಗಿ ಬಾಳ್ತಿದ್ದೀರೋ ಹಾಗೇ ಬದುಕಿ.. ನನ್ನ ಮರೆತು ಬೇರೆ ಹುಡುಗಿಯನ್ನು ನೋಡಿ ಮದ್ವೆಯಾಗಿ..' ಅಪೂರ್ವಳಿಂದ ಅಂಥ ಮಾತುಗಳನ್ನು ನಿರೀಕ್ಷಿಸಿರದ ಸೂರ್ಯ ಇನ್ನಷ್ಟು ಭೂಮಿಗಿಳಿದು ಹೋದ.

'ನಾನು ಮಾಡಿದ ಕೃತ್ಯಕ್ಕೆ ಜೀವನದಲ್ಲಿ ಏನೇನೆಲ್ಲಾ ಶಿಕ್ಷೆ ಅನುಭವಿಸಿದ್ದೀನಿ ಅಪೂರ್ವ... ನಿನ್ನನ್ನು ಅಗಲಿ ಬದುಕುವ ಶಿಕ್ಷೆ ಮಾತ್ರ ಕೊಡಬೇಡ.. ಎಲ್ಲರಿಂದ ಅಸ್ವೀಕೃತನಂತೆ ಬದುಕಿ ಬಂದ ನನಗೆ ನೀನು ಸ್ವೀಕರಿಸಿದ್ದು ನನ್ನ ಬದುಕಿನ ಅತ್ಯಮೂಲ್ಯ ಕೊಡುಗೆಯಾಗಿತ್ತು.. ಆದ್ರೆ ನನ್ನ ದುರ್ದೈವ .. ಬದುಕು ಏನೇನೋ ಪರೀಕ್ಷೆಗಳಿಗೆ ನನನ್ನು ಒಡ್ಡುತ್ತಿದೆ.. ನೀನು ಈ ಕಲ್ಲು ಬಂಡೆಯನ್ನು ಕೆತ್ತಿ ಶಿಲ್ಪ ಮಾಡಿದೆ ..ಈಗ ನೀನೇ ಒಡೆದು ಹೋಗುತ್ತಿದ್ದೀಯಾ? ಅಪೂರ್ವ ಈಗ ನಿನ್ನ ಮನಸ್ಸು ಸರಿ ಇಲ್ಲ.. ಸ್ವಲ್ಪ ಸಮಯ ಕಳೆದ ನಂತರ ಇದರ ಬಗ್ಗೆ ನಿರ್ಧರಿಸೋಣ... ಈಗ ದುಡುಕಬೇಡ..'

**(ಸಶೇಷ)**


# ಮೌನ ಮಂಟಪ

**ಖ್ಯಾತ ಕಥೆಗಾರ್ತಿ ಡಿ.ಎನ್.ಗೀತಾ ಅವರ**

**ಹೊಸ ಪತ್ತೇದಾರಿ ಕಾದಂಬರಿ ಶೀಘ್ರ ಆರಂಭ**

ಕೋಟಿ ಬಂಗಲೆಯಲ್ಲಿ ವಾಸಿಸುತ್ತಿರುವ ಯುವರಾಣಿ ಋತು ಕಾಲೇಜೊಂದರಲ್ಲಿ ಪ್ರಾಧ್ಯಾಪಕಿ. ಎಳೆಯ ವಯಸ್ಸಿನಲ್ಲೇ ತನ್ನ ಕಾರ್ ಡ್ರೈವರ್ ಜತೆ ಓಡಿ ಹೋದ ತಾಯಿಯ ಕೊರಗನ್ನು ಮರೆಯುತ್ತಾ ಬೆಳೆದು ದೊಡ್ಡವಳಾದಾಕೆ. 27ರ ಹರೆಯದ ಈ ಚೆಲುವೆ ಹೈಸ್ಕೂಲ್ ನಲ್ಲಿರುವಾಗ ಒಂದು ನೃತ್ಯ ರೂಪಕದಲ್ಲಿ ಪದ್ಮಾವತಿಯಾಗಿ ನಟಿಸಿದ್ದಳು. ಆ ನಾಟಕದಲ್ಲಿ ತಾಳಿ ಕಟ್ಟಿದ ಶ್ರೀನಿವಾಸನ ಪಾತ್ರಧಾರಿ ಹುಡುಗನನ್ನೇ ತನಗರಿವಿಲ್ಲದಂತೆ ಪ್ರೇಮಿಸತೊಡಗಿದ್ದಳು. ಆದರೆ ಹೈಸ್ಕೂಲಿನ ನಂತರ ಆತ ಎಲ್ಲಿ ಹೋದನೆಂದೇ ಗೊತ್ತಾಗುವುದಿಲ್ಲ. ಋತು ಕಳೆದ 13 ವರ್ಷಗಳಿಂದ ಅವನಿಗಾಗಿ ಕಾಯುತ್ತಿದ್ದಾಳೆ.

ಆದೊಂದು ದಿನ ಇದ್ದಕ್ಕಿದ್ದಂತೆ ಕಾಲೇಜಿನಲ್ಲಿ ಭೀಕರ ಕೊಲೆಗಳ ಸರಣಿಯೇ ನಡೆಯುತ್ತದೆ. ನಿಜಕ್ಕೂ ಕೊಲೆ ಮಾಡಿದ್ದು ಯಾರು? ಆ ಕೊಲೆಗೂ ಕಣ್ಮರೆಯಾದ ಶ್ರೀನಿವಾಸನ ಪಾತ್ರಧಾರಿಗೂ ಸಂಬಂಧ ಇದೆಯೆ? ಚಿಕ್ಕಂದಿನಲ್ಲೇ ತನ್ನ ಕಾರ್ ಡ್ರೈವರ್ ಜತೆ ಪರಾರಿಯಾದ ತಾಯಿ ಮರಳಿ ಬರುತ್ತಾಳೆಯೆ? ಪ್ರೀತಿಸಿದ ಹುಡುಗ ಮತ್ತೆ ಸಿಗುತ್ತಾನೆಯೆ?

ಕ್ಷಣ ಕ್ಷಣವೂ ಕುತೂಹಲ ಮೂಡಿಸುವ ಪತ್ತೇದಾರಿ ಕಾದಂಬರಿ.

